**ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ**

**ಕಾವೇರಿ ಬಡಾವಣೆ, ನಿ.ಸಂ.05, ಬ್ಲಾಕ್ ನಂ.01, ಕುಶಾಲನಗರ – 571234**

**Email Id: kushalnagaradtp@hotmail.com ದೂರವಾಣಿ ಸಂ: 08276–274040**

ಸಂಖ್ಯೆ:ಕುಯೋಪ್ರಾ/ಪ್ರಾ.ಸಭೆ/51/2022–23 ದಿನಾಂಕ:

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 16–09–2022 ರ ಶುಕ್ರವಾರದಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ 51 ನೇ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದವರು :–**

1) ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2) ಸದಸ್ಯ ಕಾರ್ಯದರ್ಶಿ
3) ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
4) ಶ್ರೀ ಪಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
5) ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
6) ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು
7) ಮುಖ್ಯಾಧಿಕಾರಿಗಳು, ಪಟ್ಟಣಪಂಚಾಯಿತಿ, ಕುಶಾಲನಗರ

**ಗೈರುಹಾಜರಾದವರು :–**

1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಮುಳ್ಳುಸೋಗೆ ಗ್ರಾಮ ಪಂಚಾಯಿತಿ
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕೂಡುಮಂಗಳೂರು ಗ್ರಾಮ ಪಂಚಾಯಿತಿ
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ

**ವಿಷಯ ಸಂಖ್ಯೆ:– 1):**– ದಿನಾಂಕ: 15–07–2022 ರಂದು ನಡೆದ 50ನೇ ಯೋಜನಾ ಪ್ರಾಧಿಕಾರದ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸಿರುವ ಬಗ್ಗೆ.

**ಟಿಪ್ಪಣಿ :** ದಿನಾಂಕ: 15–07–2022 ರಂದು ನಡೆದ 50ನೇ ಪ್ರಾಧಿಕಾರದ ಸಭೆಯ ನಡವಳಿಗಳನ್ನು ಓದಿ ಒಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:–** :– ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ:– 2):**– ಪ್ರಾಧಿಕಾರದ ಖಾತೆಗಳ ಜುಲೈ 2022 ಮತ್ತು ಆಗಸ್ಟ್ 2022 ರ ಮಾಹೆಗಳ ಜಮಾ ಮತ್ತು ಖರ್ಚುಗಳ ವಿವರವನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

**ಟಿಪ್ಪಣಿ :** ಪ್ರಾಧಿಕಾರದ ಖಾತೆಗಳ ಜುಲೈ 2022 ಮತ್ತು ಆಗಸ್ಟ್ 2022 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದ್ದು, ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ

**ನಿರ್ಣಯ:–** ಪ್ರಾಧಿಕಾರದ ಖಾತೆಗಳ ಜುಲೈ 2022 ಮತ್ತು ಆಗಸ್ಟ್ 2022 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ಪು.ತಿ.ನೋ**

**ವಿಷಯ ಸಂಖ್ಯೆ: 03**):– ಕುಶಾಲನಗರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ನಕ್ಷೆಗಳಿಗೆ ಸರ್ಕಾರದಿಂದ ಅಂತಿಮ ಅನುಮೋದನೆ ನೀಡಿರುವ ಬಗ್ಗೆ.

**ಟಿಪ್ಪಣಿ:** ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ನಕ್ಷೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 469 ಮೈಅಪ್ರಾ 2014 ದಿನಾಂಕ: 03–12–2014 ರಂದು ಸರ್ಕಾರದಿಂದ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ. ಅಂತೆಯೇ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ನಕ್ಷೆಗಳಿಗೆ ಸರ್ಕಾರದಿಂದ ಅಂತಿಮ ಅನುಮೋದನೆ ಪಡೆಯಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ಮತ್ತು (2) ರನ್ವಯ ಕುಶಾಲನಗರ ಜನಸಂಖ್ಯೆಯು 2031 ರಲ್ಲಿ 32,000 ರಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆಯನ್ನು ತಯಾರಿಸಲಾಗಿದ್ದು, ಪಟ್ಟಣದ ಸ್ಥಳೀಯ ಯೋಜನಾ ಪ್ರಾಧಿಕಾರದ ಒಟ್ಟು 1105 ಹೆಕ್ಟೇರ್ ಪ್ರದೇಶದಲ್ಲಿ 933.96 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ಧಿಗಾಗಿ ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ (12)ರಲ್ಲಿ ನಿಗಧಿಪಡಿಸಿರುವ ಅಂಶಗಳನ್ನು ಪರಿಗಣಿಸಿ ನಗರದ ಮುಂದಿನ ಯೋಜಿತ ಬೆಳವಣಿಗೆಗೆ ಪ್ರಸ್ತಾಪಿಸಿರುವ 1105 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 454.28 ಹೆಕ್ಟೇರ್ (ಶೇ.48.64), ವಾಣಿಜ್ಯಕ್ಕಾಗಿ 68.26 (ಶೇ.7.31), ಕೈಗಾರಿಕೆಗಾಗಿ 96.84 (ಶೇ.10.37), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕಾಗಿ 53.06 (ಶೇ.5.68), ಉದ್ಯಾನವನ ಮತ್ತು ಬಯಲುಜಾಗಕ್ಕಾಗಿ 130.71 (ಶೇ.14.0), ಸಾರ್ವಜನಿಕ ಉಪಯುಕ್ತತೆಗಾಗಿ 3.66 (ಶೇ.0.39), ಸಾರಿಗೆ ಸಂಪರ್ಕ ಮತ್ತು ವಲಯಕ್ಕೆ 127.15 (ಶೇ.13.61), ಪ್ರದೇಶವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ದಿನಾಂಕ: 02–03–2022 ರಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ದಿನಾಂಕ: 16–05–2022 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಲು ನಡೆದ ಸಭೆಯಲ್ಲಿ ಮಹಾಯೋಜನೆ ನಕ್ಷೆಯಲ್ಲಿ ನದಿಗೆ ಅಳವಡಿಸಲಾಗಿದ್ದ ಬಫರ್‌ಗೆ ಸಂಬಂಧಿಸಿದಂತೆ ವಿಸ್ತೃತ ಚರ್ಚೆಯ ನಂತರ ಈ ಕೆಳಕಂಡಂತೆ ಬಫರ್ ಅಳವಡಿಸಿ ಅದಕ್ಕನುಗುಣವಾಗಿ ಮಹಾಯೋಜನೆಯ ನಕ್ಷೆ ಮತ್ತು ವರದಿಯನ್ನು ಮಾರ್ಪಡಿಸಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

1. ನದಿ– ನದಿ ಅಂಚಿನಿಂದ (ಕಂದಾಯ ದಾಖಲೆಯಂತೆ) 50ಮೀ ಬಫರ್ ಅಥವಾ ಸರ್ಕಾರವು ಕಾಲಕಾಲಕ್ಕೆ ನಿಗಧಿಸಲಾಗುವ ಬಫರ್
2. ಕೆರೆಗಳಿಗೆ– ಕೆರೆ ಅಂಚಿನಿಂದ (ಕಂದಾಯ ದಾಖಲೆಯಂತೆ/ ಕೆರೆ ಅಭಿವೃದ್ಧಿ ಪ್ರಾಧಿಕಾರ ನಿಗದಿಪಡಿಸಿರುವಂತೆ) 30ಮೀ ಬಫರ್
3. ವಲಯ ನಿಯಮಾವಳಿಗಳಲ್ಲಿ ನಾಲಾ/ ಹಳ್ಳಗಳಿಗೆ ಈ ಕೆಳಕಂಡಂತೆ ಬಫರ್ ಅಳವಡಿಸುವುದು.
   - 12ಮೀ ಗಿಂತ ಹೆಚ್ಚಿನ ಅಗಲ ಹೊಂದಿರುವ ನಾಲಾಗಳಿಗೆ ಅಂಚಿನಿಂದ (ಕಂದಾಯ ದಾಖಲೆಯಂತೆ) 15ಮೀ ಬಫರ್.
   - 6ಮೀ ಗಿಂತ ಹೆಚ್ಚಿನ ಮತ್ತು 12ಮೀ ವರೆಗಿನ ಅಗಲ ಹೊಂದಿರುವ ನಾಲಾಗಳಿಗೆ ಅಂಚಿನಿಂದ (ಕಂದಾಯ ದಾಖಲೆಯಂತೆ) 9ಮೀ ಬಫರ್.
   - 6ಮೀ ಅಗಲವರೆಗಿನ ನಾಲಾಗಳಿಗೆ ಅಂಚಿನಿಂದ (ಕಂದಾಯ ದಾಖಲೆಯಂತೆ) 6ಮೀ ಬಫರ್.

ಮುಂದುವರೆದು, ನದಿಗೆ ಹಾಲಿ ಅಳವಡಿಸಿರುವ 30 ಮೀಟರ್ ಬಫರ್ ನೊಂದಿಗೆ ಅಳವಡಿಸಿರುವ 12 ಮೀಟರ್ ಅಗಲದ ರಸ್ತೆಯನ್ನು 50 ಮೀಟರ್ ಬಫರ್ ಅಳವಡಿಸಿದ ನಂತರ ಸೂಕ್ತವಾಗಿ (9ಮೀ ಮತ್ತು

**ಪು.ತಿ.ನೋ**

12ಮೀ ಅಗಲಕ್ಕೆ) ಪಂಕ್ತಿಕರಿಸಿ ಅಳವಡಿಸಿಕೊಳ್ಳುವಂತೆ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಪ್ರವಾಹ ನಿರ್ವಹಣೆಗೆ ಸಂಬಂಧಿಸಿದಂತೆ ನೀಡಿರುವ ಮಾರ್ಗಸೂಚಿಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕಟ್ಟಡಗಳನ್ನು ಅಳವಡಿಸಿಕೊಳ್ಳಲು ಸೂಚಿಸಿರುವ ನಿಯಮಗಳನ್ನು ವಲಯ ನಿಯಮಾವಳಿಯಲ್ಲಿ ಅಳವಡಿಸಿಕೊಳ್ಳಲು ಸೂಚಿಸಲಾಗಿತ್ತು.

ಸರ್ಕಾರದ ಕಾರ್ಯದರ್ಶಿಗಳ ಸಭೆಯಲ್ಲಿ ನಿರ್ಣಯಿಸಿ ಸೂಚಿಸಿದಂತೆ ಮಹಾಯೋಜನೆ ನಕ್ಷೆಯಲ್ಲಿ ಮತ್ತು ವಲಯ ನಿಯಮಾವಳಿಯಲ್ಲಿ ಮಾರ್ಪಾಡುಗಳನ್ನು ಅಳವಡಿಸಿಕೊಂಡು ದಿನಾಂಕ: 08–06–2022 ರಂದು ಪ್ರಸ್ತಾವನೆಯನ್ನು ಮತ್ತೊಮ್ಮೆ ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಇವರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರು ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಅದೇಶ ಸಂಖ್ಯೆ: ನಅಇ 171 ಮೈಅಪ್ರಾ 2022, ಬೆಂಗಳೂರು ದಿನಾಂಕ: 18–08–2022 ರಲ್ಲಿ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಗೆ ಸದರಿ ಆದೇಶದ ದಿನಾಂಕದಿಂದ ಎರಡು ವರ್ಷಗಳವರೆಗೆ ಪ್ರಾಧಿಕಾರವು ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದಲ್ಲ ಎಂಬ ಷರತ್ತಿಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಕುಶಾಲನಗರ ಯೋಜನಾ ಪ್ರಾಧಿಕಾರದ ಅಂತಿಮ ಮಹಾಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(4) ರನ್ವಯ ಮಹಾಯೋಜನೆ ಅಂತಿಮ ಅನುಮೋದನೆಗೊಂಡಿರುವ ಬಗ್ಗೆ ಸಾರ್ವಜನಿಕ ಗಮನಕ್ಕೆ ತರುವ ಬಗ್ಗೆ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಅಳವಡಿಸಿಕೊಳ್ಳಲು ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ಘಟನ್ನೋತ್ತರ ಮಂಜೂರಾತಿ ನೀಡಿದ್ದು, ಅದರಂತೆ ಸಾರ್ವಜನಿಕ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪತ್ರ ಭಾಗ 6ಎ ಸಂಪುಟ 157 ಸಂಚಿಕೆ 64 ರಲ್ಲಿ ದಿನಾಂಕ: 01–09–2022 ರಂದು ಪ್ರಕಟಿಸಲಾಗಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

**ನಿರ್ಣಯ:** ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಗೆ ಸರ್ಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡಿದ್ದು, ದಿನಾಂಕ: 18–08–2022 ರಂದು ಈ ಬಗ್ಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಆದೇಶವು ಪ್ರಕಟಗೊಂಡಿದ್ದು, ಕಾಯ್ದೆ ಕಲಂ 13(4) ರನ್ವಯ ಸಾರ್ವಜನಿಕ ಪ್ರಕಟಣೆಯನ್ನು ಘಟನ್ನೋತ್ತರ ಮಂಜೂರಾತಿಯೊಂದಿಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವುದನ್ನು ಸಭೆಯು ಸ್ಥಿರೀಕರಿಸಿತು ಹಾಗೂ ಮಹಾಯೋಜನೆ ಮತ್ತು ವಲಯನಿಯಮಾವಳಿಯನ್ನು ಅನುಷ್ಠಾನಗೊಳಿಸಲು ಸಭೆಯು ತೀರ್ಮಾನಿಸಿ ನಿರ್ಣಯಿಸಿತು.

**ವಿಷಯ ಸಂಖ್ಯೆ: 04** – ಕುಶಾಲನಗರ ಯೋಜನಾ ಪ್ರಾಧಿಕಾರದ ಮಹಾಯೋಜನೆ(ಅಂತಿಮ) ಯನ್ನು ಸಿದ್ಧಪಡಿಸಿದ ಮೆ॥ ಒನ್‌ನೆಸ್ ಇನ್‌ಫ್ರಾಟೆಕ್, ಬೆಂಗಳೂರು ಸಂಸ್ಥೆಗೆ ರೂ. 97,940=00 ಗಳನ್ನು ಪಾವತಿಸುವ ಬಗ್ಗೆ.

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಮೇ॥ ಒನ್‌ನೆಸ್ ಇನ್‌ಫ್ರಾಟೆಕ್, ಬೆಂಗಳೂರು ಇವರು ದಿನಾಂಕ: 23–08–2022 ರಂದು ಪತ್ರ ಬರೆದು ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಸಿದ್ಧಪಡಿಸಿರುವ ಮಹಾಯೋಜನೆ (ಅಂತಿಮ) ನಕ್ಷೆಯಲ್ಲಿ ಹಾಲಿ ಹಾಗೂ ಪ್ರಸ್ತಾವಿತ ರಸ್ತೆಗಳನ್ನು ಅಳವಡಿಸಿ ನಕ್ಷೆಗಳನ್ನು ಸಿದ್ಧಪಡಿಸಿರುವ ಬಾಬ್ತು ರೂ. 97,940=00 ಗಳನ್ನು ನೀಡಬೇಕೆಂದು ಕೋರಿರುತ್ತಾರೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ಪು.ತಿ.ನೋ**

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಮೇ॥ ಒನ್‌ನೆಸ್ ಇನ್‌ಫ್ರಾಟೆಕ್, ಬೆಂಗಳೂರು ಸಂಸ್ಥೆಯು ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಮಹಾಯೋಜನೆ ಅಂತಿಮ ನಕ್ಷೆ ಸಿದ್ಧಪಡಿಸಿ ಸಲ್ಲಿಸಿದ್ದು, ಸದರಿ ನಕ್ಷೆಗಳಲ್ಲಿ ಹಾಲಿ ಇರುವ ಹಾಗೂ ಪ್ರಸ್ತಾವಿಸಿರುವ ರಸ್ತೆಗಳನ್ನು ಅಳವಡಿಸಿ ಮೂರು ಸೆಟ್ ಮಹಾಯೋಜನೆ ನಕ್ಷೆಗಳನ್ನು ನೀಡಿರುತ್ತಾರೆ. ಸರ್ಕಾರದಿಂದ ಅಂತಿಮ ಮಹಾಯೋಜನೆ ನಕ್ಷೆಗೆ ದಿನಾಂಕ: 18–08–2022 ಅನುಮೋದನೆ ನೀಡಲಾಗಿದೆ. ಮಹಾಯೋಜನೆ ತಾತ್ಕಾಲಿಕ ಸಿದ್ಧಪಡಿಸುವ ಕೆಲಸವನ್ನು ಇದೇ ಸಂಸ್ಥೆಯು ಪೂರೈಸಿದ್ದು, ಪ್ರಸ್ತುತ ಅಂತಿಮ ಮಹಾಯೋಜನೆಯನ್ನು ಇದೇ ಸಂಸ್ಥೆಯಿಂದ ಸಿದ್ಧಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದ್ದುದ್ದರಿಂದ ಈ ಹಿಂದಿನ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಮತ್ತು Karnataka Transparency in public procurement act 1999 ಕಲಂ 4(c) ಮತ್ತು e (ii) ರಂತೆ ಮೊತ್ತವು ಮಿತಿಯಲ್ಲಿರುವುದರಿಂದ ಸದರಿ ಸಂಸ್ಥೆಗೆ ರೂ. 97,940/– ಗಳನ್ನು ಪಾವತಿಸಬಹುದಾಗಿದ್ದು ವಿಷಯವನ್ನು ಸಭೆಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಮಹಾಯೋಜನೆ ನಕ್ಷೆಗಳಲ್ಲಿ ಹಾಲಿ ಹಾಗೂ ಪ್ರಸ್ತಾವಿತ ರಸ್ತೆಗಳನ್ನು ಅಳವಡಿಸಿ ಮಹಾಯೋಜನೆ ಅಂತಿಮ ಸಿದ್ಧಪಡಿಸಿ 3 ಸೆಟ್ ನಕ್ಷೆಗಳನ್ನು ಸಲ್ಲಿಸಿರುವುದರಿಂದ ಒನ್‌ನೆಸ್ ಇನ್‌ಫ್ರಾಟೆಕ್ ಬೆಂಗಳೂರು ಸಂಸ್ಥೆಗೆ ರೂ. 97,940=00 ಗಳನ್ನು ಪಾವತಿಸಲು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

**ವಿಷಯ ಸಂಖ್ಯೆ: 05–** ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 37/1 (ಆರ್.ಟಿ.ಸಿ ಯಂತೆ ಸ.ನಂ. 37/4) ರಲ್ಲಿನ 0.20 ಎಕರೆ ವಿಸ್ತೀರ್ಣದ ಜಮೀನಿನ ಏಕ–ನಿವೇಶನ ವಸತಿ ವಿನ್ಯಾಸ ನಕ್ಷೆಗೆ ನೀಡಿರುವ ತಾಂತ್ರಿಕ ಅನುಮೋದನೆಯನ್ನು ಸಭೆಯು ಸ್ಥಿರೀಕರಿಸುವ ಬಗ್ಗೆ. **(ಅರ್ಜಿದಾರರು:– ಶ್ರೀ ಬಿ.ಆರ್. ಸುರೇಶ್ ಬಿನ್ ಪೌತಿ ರಾಮಪ್ಪ)**

**ಟಿಪ್ಪಣಿ:** ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 37/1 (ಆರ್.ಟಿ.ಸಿ ಯಂತೆ ಸ.ನಂ. 37/4) ರಲ್ಲಿನ 0.20 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: 196871 ದಿನಾಂಕ: 05–04–2021 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದೆ ಹಾಗೂ ದಕ್ಷಿಣ ದಿಕ್ಕಿನಲ್ಲಿ 10.0ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಗೆ ಲಗತ್ತಾಗಿದ್ದು ಸದರಿ ರಸ್ತೆಯನ್ನು ಮಹಾಯೋಜನೆ ನಕ್ಷೆಯಲ್ಲಿ 12.0ಮೀ ಅಗಲಕ್ಕೆ ಪ್ರಸ್ತಾವಿಸಲಾಗಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 775.72 ಚ.ಮೀ (ಶೇ. 97.98%) ಮತ್ತು ರಸ್ತೆ ಅಗಲೀಕರಣಕ್ಕಾಗಿ 16.00 ಚ.ಮೀ (ಶೇ. 02.02%) ವಿಸ್ತೀರ್ಣದ ಪ್ರದೇಶವನ್ನು ನಿಗದಿಪಡಿಸಿ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥೀರೀಕರಣಕ್ಕಾಗಿ ಮಂಡಿಸಿದೆ.

**ನಿರ್ಣಯ:** ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಕಡತಕ್ಕೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಸ್ಥಿರೀಕರಿಸಿತು.

**ವಿಷಯ ಸಂಖ್ಯೆ: 06** – ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/5 ರಲ್ಲಿನ 0.33.55 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಜಿ.ಟಿ. ಬಸವರಾಜು ಬಿನ್ ಪೌತಿ ತಮ್ಮಯ್ಯ**).

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/5 ರಲ್ಲಿನ 0.33.55 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ:ಭೂಪರಿ/113/17–18 LAND10002157 ದಿನಾಂಕ: 17–03–2018 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದೆ ಹಾಗೂ ದಕ್ಷಿಣ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಉಪಗಮನ ಹೊಂದಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 1169.64 ಚ.ಮೀ (ಶೇ. 86.47%) ಮತ್ತು ಹಾಲಿ ಉಪಗಮನ ಕಲ್ಪಿಸುವ ರಸ್ತೆಯನ್ನು ಮುಂದುವರೆಸಲು ಅರ್ಜಿದಾರರ ಜಮೀನಿನಲ್ಲಿ ರಸ್ತೆಗಾಗಿ 182.92 ಚ.ಮೀ (ಶೇ. 13.53%) ವಿಸ್ತೀರ್ಣದ ಪ್ರದೇಶವನ್ನು ಮೀಸಲಿರಿಸಿ ಕರಡು ವಿನ್ಯಾಸ ನಕ್ಷೆ ಸಲ್ಲಿಸಿರುತ್ತಾರೆ. ಸದರಿ ಜಮೀನು ನದಿ ನೀರಿನಿಂದ ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದು ಗಮನದಲ್ಲಿದ್ದು ನಮಗೆ ಇದೊಂದೆ ನಿವೇಶನವಿದ್ದು ಕಟ್ಟಡ ಪರವಾನಿಗೆ ಸಂದರ್ಭ ವಿಧಿಸಲಾಗುವ ಷರತ್ತಿಗೆ ಬದ್ಧನಾಗಿರುವುದಾಗಿ ಮತ್ತು ಒಂದೊಮ್ಮೆ ನಿವೇಶನವನ್ನು ಮಾರಾಟ ಮಾಡುವ ಸಂದರ್ಭ ನಿವೇಶನವನ್ನು ಕೊಳ್ಳುವವರಿಗೆ ನಿವೇಶನವು ಜಲಾವೃತಗೊಳ್ಳುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುತ್ತೇನೆ ಹಾಗೂ ನದಿ ನೀರಿನಿಂದ ಜಲಾವೃತಗೊಳ್ಳುವ ಸಂದರ್ಭದಲ್ಲಾಗುವ ನಷ್ಟಗಳಿಗೆ ಪ್ರಾಧಿಕಾರವನ್ನು ಜವಾಬ್ದಾರಿಯನ್ನಾಗಿಸದೇ ಸಂಪೂರ್ಣವಾಗಿ ಜವಾಬ್ದಾರಿಯನ್ನು ವಹಿಸುವುದಾಗಿ ಅರ್ಜಿದಾರರು ಪ್ರಮಾಣಪತ್ರ ಸಲ್ಲಿಸಿರುತ್ತಾರೆ. ಸದರಿ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ದಿನಾಂಕ: 15–07–2022 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ (03) ರಲ್ಲಿ ಚರ್ಚಿಸಲಾಗಿ, ಪ್ರಸ್ತಾವಿತ ನಿವೇಶನವು ನದಿ ನೀರಿನಿಂದ ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದರಿಂದ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರು ಜಮೀನಿನ ಸ್ಥಳಪರಿಶೀಲನೆಯನ್ನು ನಡೆಸಿದ ನಂತರ ಕಡತವನ್ನು ಮುಂದಿನ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಅದರಂತೆ ದಿನಾಂಕ: 11–08–2022 ರಂದು ಪ್ರಾಧಿಕಾರದಿಂದ ಜಮೀನಿನ ಸ್ಥಳಪರಿಶೀಲನೆಯನ್ನು ನಡೆಸಲಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 11–08–2022 ರಂದು ಪ್ರಾಧಿಕಾರದಿಂದ ಜಮೀನಿನ ಸ್ಥಳಪರಿಶೀಲನೆಯನ್ನು ನಡೆಸಲಾಗಿದ್ದು, ಸರ್ಕಾರದಿಂದ ಅನುಮೋದನೆಗೊಂಡ ಅಂತಿಮ ಮಹಾಯೋಜನೆಯ ವಲಯನಿಯಮಾವಳಿಯಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಪ್ರವಾಹ ನಿರ್ವಹಣೆಗೆ ಸಂಬಂಧಿಸಿದಂತೆ ನೀಡಿರುವ ಮಾರ್ಗಸೂಚಿಯಲ್ಲಿ ಜಲಾವೃತಗೊಳ್ಳುವ ಪ್ರದೇಶಗಳಲ್ಲಿ ಕಟ್ಟಡಗಳನ್ನು ನಿರ್ಮಿಸಲು ಅಳವಡಿಸಿಕೊಳ್ಳಲು ಸೂಚಿಸಿರುವ ನಿಯಮಗಳನ್ನು ಅಳವಡಿಸಲಾಗಿರುತ್ತದೆ. ಅದರಂತೆ ನೆಲ ಅಂತಸ್ತಿನಲ್ಲಿ ವಸತಿ ಉದ್ದೇಶಕ್ಕೆ ಕಟ್ಟಡ ನಿರ್ಮಿಸಲು ಅವಕಾಶವಿರುವುದಿಲ್ಲ. ಕಟ್ಟಡದ ಪ್ಲಿಂತ್ ಕನಿಷ್ಟ 0.60ಮೀ ಎತ್ತರವಿರತಕ್ಕದ್ದು ಹಾಗೂ ಕಟ್ಟಡದ ಎತ್ತರ ನೆಲ+2 ಅಥವಾ 10.0ಮೀ ಮಿತಿಯೊಳಗೆ ಇರಬೇಕಿರುತ್ತದೆ. ಪ್ರಸ್ತಾವಿತ ಜಮೀನು ಅಂತಿಮ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದ್ದು, ದಕ್ಷಿಣ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಉಪಗಮನ ಹೊಂದಿದೆ. ಅರ್ಜಿದಾರರು ವಸತಿ ಉಪಯೋಗಕ್ಕಾಗಿ 1169.64 ಚ.ಮೀ (ಶೇ. 86.47%) ಮತ್ತು ಹಾಲಿ ಉಪಗಮನ ಕಲ್ಪಿಸುವ ರಸ್ತೆಯನ್ನು ಮುಂದುವರೆಸಲು ಅರ್ಜಿದಾರರ ಜಮೀನಿನಲ್ಲಿ ರಸ್ತೆಗಾಗಿ 182.92 ಚ.ಮೀ (ಶೇ. 13.53%) ವಿಸ್ತೀರ್ಣದ ಪ್ರದೇಶವನ್ನು ಮೀಸಲಿರಿಸಿ ಕರಡು ಏಕ–ನಿವೇಶನ ವಸತಿ ವಿನ್ಯಾಸ ನಕ್ಷೆ ಸಲ್ಲಿಸಿರುತ್ತಾರೆ. ನಿವೇಶನವು ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದರಿಂದ ಕಟ್ಟಡ ನಿರ್ಮಾಣ ಅನುಮೋದನೆ ಸಂದರ್ಭ ವಲಯನಿಯಮಾವಳಿಯಂತೆ ವಿಧಿಸಲಾಗುವ ಎಲ್ಲಾ ನಿಯಮಗಳಿಗೆ ಅರ್ಜಿದಾರರು/ನಿವೇಶನದ ಮಾಲೀಕರು ಬದ್ಧರಿರುವ ಷರತ್ತು ವಿಧಿಸಿ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಬಹುದಾಗಿದ್ದು ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ಪು.ತಿ.ನೋ**

**ನಿರ್ಣಯ:** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಪ್ರಸ್ತಾವಿತ ನಿವೇಶನವು ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿರುವುದರಿಂದ, ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದರಿಂದ ಜಲಾವೃತ ಪ್ರದೇಶಗಳಲ್ಲಿ ಕಟ್ಟಡ ನಿರ್ಮಿಸಲು ವಲಯ ನಿಯಮಾವಳಿಯಂತೆ ವಿಧಿಸಲಾಗುವ ಎಲ್ಲಾ ನಿಯಮಗಳಿಗೆ ಒಳಪಟ್ಟು ಅರ್ಜಿದಾರರು/ನಿವೇಶನದ ಮಾಲೀಕರು ಕಟ್ಟಡ ನಿರ್ಮಿಸುವ ಷರತ್ತು ವಿಧಿಸಿ ಏಕ–ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ ಸಂಖ್ಯೆ: 07** – ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 37/4 ರಲ್ಲಿನ 1.65 ಎಕರೆ ಪೈಕಿ 1.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಜವಹಾರ, ಶ್ರೀ ರಾಜವೆಲ್ ಹಾಗೂ ಶ್ರೀ ಕಾರ್ತಿವೆಲ್**).

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ ಜಮೀನಿನ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 238335 ದಿನಾಂಕ: 10–12–2021 ರಲ್ಲಿ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 37/14 ರಲ್ಲಿ 1.50 ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ Residential-layout ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ವಸತಿ ವಲಯದಲ್ಲಿದ್ದು, ಸ್ಥಳ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ಜಮೀನು ಉತ್ತರ ದಿಕ್ಕಿನಲ್ಲಿ 5.60ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಗೆ ಲಗತ್ತಾಗಿರುತ್ತದೆ ಹಾಗೂ ಹಾಲಿ ವಸತಿ ಬೆಳವಣಿಗೆಗೆ ಹೊಂದಿಕೊಂಡಿದೆ. ಹಾಲಿ ಇರುವ ರಸ್ತೆಯನ್ನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ 15.0ಮೀ ಅಗಲೀಕರಣಕ್ಕಾಗಿ ಪ್ರಸ್ತಾವಿಸಲಾಗಿದೆ. ಅರ್ಜಿದಾರರು ನಿಯಮಾನುಸಾರ ವಿನ್ಯಾಸ ನಕ್ಷೆ ತಯಾರಿಸಿ ಸಲ್ಲಿಸಿದ್ದು ಕರಡು ವಿನ್ಯಾಸ ನಕ್ಷೆಯನ್ನು ಪರಿಶೀಲಿಸಲಾಗಿ, ಸದರಿ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 3283.566 ಚ.ಮೀ (ಶೇ.54.09%), ಉದ್ಯಾನವನ ಹಾಗೂ ಆಟದ ಮೈದಾನಕ್ಕಾಗಿ 606.583 ಚ.ಮೀ (ಶೇ.10.00%), ನಾಗರೀಕ ಸೌಲಭ್ಯಕ್ಕಾಗಿ 303.543 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 1876.00 ಚ.ಮೀ (ಶೇ.30.91%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಲಾಗಿದ್ದು ವಿಷಯನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರಸ್ತಾವಿತ ಜಮೀನಿಗೆ ಗ್ರಾಮಪಂಚಾಯಿತಿ ರಸ್ತೆಗೆ ಲಗತ್ತಾಗಿರುವುದರಿಂದ ಹಾಗೂ ಅಂತಿಮ ಮಹಾಯೋಜನೆಯಲ್ಲಿ ಜಮೀನು ವಸತಿ ವಲಯದಲ್ಲಿದ್ದು ಹಾಲಿ ರಸ್ತೆಯನ್ನು 15.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಿ ನಿಯಮಾನುಸಾರ ಕರಡು ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸಿದ್ದು ಸದರಿ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 3283.566 ಚ.ಮೀ (ಶೇ.54.09%), ಉದ್ಯಾನವನ ಹಾಗೂ ಆಟದ ಮೈದಾನಕ್ಕಾಗಿ 606.583 ಚ.ಮೀ (ಶೇ.10.00%), ನಾಗರೀಕ ಸೌಲಭ್ಯಕ್ಕಾಗಿ 303.543 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 1876.00 ಚ.ಮೀ (ಶೇ.30.91%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಲಾಗಿದೆ. ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು ಈ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಸಲುವಾಗಿ ವಿಷಯನ್ನು ಸಭೆಗೆ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 3283.566 ಚ.ಮೀ (ಶೇ.54.09%), ಉದ್ಯಾನವನ ಹಾಗೂ ಆಟದ ಮೈದಾನಕ್ಕಾಗಿ 606.583 ಚ.ಮೀ (ಶೇ.10.00%), ನಾಗರೀಕ ಸೌಲಭ್ಯಕ್ಕಾಗಿ 303.543 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 1876.00 ಚ.ಮೀ (ಶೇ.30.91%) ಕಾಯ್ದಿರಿಸಿರುವುದನ್ನು ಸಭೆಯು ಪರಿಶೀಲಿಸಿತು. ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದ್ದು, ವಸತಿ ಉದ್ದೇಶಕ್ಕೆ ಭೂ–ಪರಿವರ್ತನೆಗೊಂಡಿರುವುದರಿಂದ ಹಾಗೂ ಜಮೀನು ಗ್ರಾಮಪಂಚಾಯಿತಿ ರಸ್ತೆಗೆ ಲಗತ್ತಾಗಿದ್ದು, ಹಾಲಿ ಬೆಳವಣಿಗೆ ಹೊಂದುತ್ತಿರುವ ಪ್ರದೇಶಕ್ಕೆ

**ಪು.ತಿ.ನೋ**

ಸಮೀಪವಿರುವುದರಿಂದ ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2) ಮತ್ತು (2ಎ) ರನ್ವಯ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

**ವಿಷಯ ಸಂಖ್ಯೆ: 08** – ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 11596/2022 (KLR-RES) ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಿದ್ದ ವಕೀಲರಿಗೆ ಶುಲ್ಕವನ್ನು ಪಾವತಿಸುವ ಬಗ್ಗೆ

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚನ್ಯಾಯಾಲಯದಲ್ಲಿ ಶ್ರೀ ಪುರುಷೋತ್ತಮ್ ರೈ ಇವರು ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಮತ್ತು ಇತರರು ವಿರುದ್ಧ ರಿಟ್ ಅರ್ಜಿ ಸಂಖ್ಯೆ 11596/2022 (KLR-RES) ದಾಖಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ಯೋಜನಾ ಪ್ರಾಧಿಕಾರ ಕುಶಾಲನಗರವನ್ನು 5ನೇ ಪ್ರತಿವಾದಿಯನ್ನಾಗಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಡಿಕೆವಾರು ಉತ್ತರ ತಯಾರಿಸಿ ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಲು ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಇವರು ಈ ಕಛೇರಿಗೆ ತಿಳಿಸಿರುತ್ತಾರೆ. ಅದರಂತೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕಛೇರಿಯ ಕಂಡಿಕೆವಾರು ವಿವರಣೆ ಹಾಗೂ ದಾಖಲೆಗಳನ್ನು ಸರ್ಕಾರಿ ವಕೀಲರಿಗೆ ಸಲ್ಲಿಸಲಾಗಿರುತ್ತದೆ. ಪರಿಶೀಲಿಸಿದ ಸರ್ಕಾರಿ ವಕೀಲರು ಯೋಜನಾ ಪ್ರಾಧಿಕಾರವು ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ನ್ಯಾಯಾಲಯದಲ್ಲಿ ಈ ಕಛೇರಿಯ ಪರವಾಗಿ ಪ್ರತಿನಿಧಿಸಲು ಅವಕಾಶವಿರುವುದಿಲ್ಲ ಹಾಗಾಗಿ ಕಂಡಿಕೆವಾರು ಉತ್ತರವನ್ನು ಈ ಕಛೇರಿಯಲ್ಲಿ ಪರಿಗಣಿಸಲು ಅವಕಾಶವಿರುವುದಿಲ್ಲ ಆದ್ದರಿಂದ ಖಾಸಗಿ ವಕೀಲರ ನೆರವನ್ನು ಪಡೆಯುವಂತೆ ಮೌಖಿಕವಾಗಿ ಸೂಚಿಸಿರುತ್ತಾರೆ. ಅದರಂತೆ ಖಾಸಗಿ ವಕೀಲರಾದ ಶ್ರೀಮತಿ ಜೆ. ಕಲಾದೀಪ, ಬೆಂಗಳೂರು ಇವರನ್ನು ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಲು ಕೋರಲಾಗಿತ್ತು. ಅದರಂತೆ ಶ್ರೀಮತಿ ಜೆ. ಕಲಾದೀಪ ವಕೀಲರು ಬೆಂಗಳೂರು ಇವರು ಪ್ರಾಧಿಕಾರದ ಪರ ವಕಾಲತ್ತು ವಹಿಸಿದ್ದು, ದಿನಾಂಕ: 03–08–2022 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯವು ಆದೇಶ ನೀಡಿರುತ್ತದೆ. ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಿದ ಶುಲ್ಕ ರೂ. 10,000/– ಗಳನ್ನು ಪಾವತಿಸುವಂತೆ ವಕೀಲರು ದಿನಾಂಕ: 20–08–2022 ರಂದು ಪತ್ರ ಬರೆದು ಕೋರಿರುತ್ತಾರೆ. ವಕೀಲರಿಗೆ ಶುಲ್ಕವನ್ನು ಪಾವತಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದೂರುದಾರರು ಪ್ರಾಧಿಕಾರವನ್ನು 5ನೇ ಎದುರುದಾರರನ್ನಾಗಿಸಿದ್ದು, ಪ್ರಕರಣವನ್ನು ಖಾಸಗಿ ವಕೀಲರು ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ವಕಾಲತ್ತು ವಹಿಸಿಕೊಂಡಿದ್ದು, ಪ್ರಸ್ತುತ ಪ್ರಕರಣವು ಮುಗಿದಿರುವುದರಿಂದ ವಕಾಲತ್ತು ವಹಿಸಿದ ಶುಲ್ಕ ರೂ. 10,000/– ಗಳನ್ನು ವಕೀಲರಿಗೆ ಪಾವತಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ರಿಟ್ ಅರ್ಜಿ ಸಂಖ್ಯೆ 11596/2022 (KLR-RES) ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ವಕಾಲತ್ತು ವಹಿಸಿರುವ ಶ್ರೀಮತಿ ಜೆ. ಕಲಾದೀಪ ವಕೀಲರು ಬೆಂಗಳೂರು ಇವರಿಗೆ ವಕಾಲತ್ತು ಶುಲ್ಕ ರೂ. 10,000/– ಗಳನ್ನು ಪಾವತಿಸುವಂತೆ ಸದಸ್ಯಕಾರ್ಯದರ್ಶಿಯವರಿಗೆ ಸಭೆಯು ಸೂಚಿಸಿ ನಿರ್ಣಯಿಸಿತು. ಮುಂದೆ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾದ್ದಲ್ಲಿ ಪ್ರಾಧಿಕಾರದ ಪರವಾಗಿ ಮಾನ್ಯನ್ಯಾಯಾಲಯದಲ್ಲಿ ವಕಾಲತ್ತು ವಹಿಸಲು ಸೂಕ್ತವಾದ ವಕೀಲರನ್ನು ನಿಯೋಜಿಸಿಕೊಳ್ಳುವಂತೆ ಸಭೆಯು ನಿರ್ಣಯಿಸಿ ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿತು.

**ಪು.ತಿ.ನೋ**

**<u>ವಿಷಯ ಸಂಖ್ಯೆ: 09</u>** – ಪ್ರಾಧಿಕಾರದ ಕಛೇರಿ ಕಟ್ಟಡದ ಬಾಡಿಗೆಯನ್ನು ಹೆಚ್ಚಿಸುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು:–ಶ್ರೀ ಕೆ.ಬಿ. ಅಜಿತ್ ಕುಮಾರ್**).

**<u>ಟಿಪ್ಪಣಿ:</u>** ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿ ಕಟ್ಟಡದ ಮಾಲೀಕರಾದ ಶ್ರೀ ಕೆ.ಬಿ. ಅಜಿತ್ ಕುಮಾರ್, ಕಾವೇರಿ ಬಡಾವಣೆ, ಕುಶಾಲನಗರ ಇವರು ದಿನಾಂಕ: 05–09–2022 ರಂದು ಮನವಿ ಸಲ್ಲಿಸಿ, ಸುಮಾರು ಮೂರು ವರ್ಷಗಳಿಂದ ಕಛೇರಿ ಬಾಡಿಗೆಯನ್ನು ಹೆಚ್ಚಿಸಿರುವುದಿಲ್ಲ ಹಾಗಾಗಿ ಕಛೇರಿ ಬಾಡಿಗೆಯನ್ನು ರೂ. 9,000/– ಗಳಿಂದ ರೂ. 11,000/– ಗಳಿಗೆ ತಕ್ಷಣದಿಂದ ಹೆಚ್ಚಿಸಿಕೊಡಬೇಕೆಂದು ಕೋರಿರುತ್ತಾರೆ. ವಿಷಯವನ್ನು ಸಭೆಗೆ ಮಂಡಿಸಿದೆ.

**<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u>** ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಗೆ ದಿನಾಂಕ: 01–10–2019 ರಿಂದ ಕಛೇರಿ ಬಾಡಿಗೆಯನ್ನು ಪ್ರತಿ ಮಾಹೆ ರೂ. 9,000/– ಗಳಂತೆ ಪಾವತಿಸುತ್ತಿದ್ದು, ಕಟ್ಟಡದ ಮಾಲೀಕರು ಕಛೇರಿ ಬಾಡಿಗೆಯನ್ನು ರೂ. 11,000/– ಗಳಿಗೆ ಹೆಚ್ಚಿಸುವಂತೆ ಕೋರಿರುತ್ತಾರೆ. ಕಛೇರಿ ಬಾಡಿಗೆ ದರವನ್ನು ನಿಯಮಾನುಸಾರ ಲೋಕೋಪಯೋಗಿ ಇಲಾಖೆಯಿಂದ ನಿಗಧಿಪಡಿಸಿಕೊಳ್ಳಬೇಕಿರುತ್ತದೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

**<u>ನಿರ್ಣಯ:</u>** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಕಛೇರಿ ಬಾಡಿಗೆ ದರವನ್ನು ನಿಗಧಿಪಡಿಸಿಕೊಡುವಂತೆ ಕೋರಿ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯುವಂತೆ ಹಾಗೂ ನಿಗಧಿಪಡಿಸಿರುವ ದರದ ಬಗ್ಗೆ ವಿಷಯವನ್ನು ಪ್ರಾಧಿಕಾರದ ಮುಂದಿನ ಸಭೆಗೆ ಮಂಡಿಸುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

**<u>ವಿಷಯ ಸಂಖ್ಯೆ: 10–</u> ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:–**

**<u>(ಅ)</u>** – ಸದಸ್ಯ ಕಾರ್ಯದರ್ಶಿಯವರು ಮಾತನಾಡಿ ಜಮೀನಿನ ಭೂ–ಪರಿವರ್ತನೆಗೆ ಕಂದಾಯ ಇಲಾಖೆಗೆ ನೀಡಲಾಗುತ್ತಿರುವ ನಿರಾಕ್ಷೇಪಣಾ ಪತ್ರಕ್ಕೆ ಅರ್ಜಿದಾರರಿಂದ ಪರಿಶೀಲನೆ ಶುಲ್ಕವನ್ನು ದಿನಾಂಕ 07–09–2019 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ (31) ರಲ್ಲಿನ ನಿರ್ಣಯದ ಮೇರೆಗೆ ಪಾವತಿಸಿಕೊಳ್ಳಲಾಗುತ್ತಿತ್ತು. ಆದರೆ ಪ್ರಸ್ತುತ ಭೂ–ಪರಿವರ್ತನೆಗೆ ನಿರಾಕ್ಷೇಪಣಾ ನೀಡಲು ಶುಲ್ಕ ಪಾವತಿಸಿಕೊಳ್ಳದಂತೆ ಸರ್ಕಾರದಿಂದ ನಿರ್ದೇಶನ ನೀಡಲಾಗಿರುತ್ತದೆ. ಹಾಗಾಗಿ ಅದರಂತೆ ಕಾರ್ಯನಿರ್ವಹಿಸಬೇಕಿರುತ್ತದೆ ಎಂಬುದಾಗಿ ಸದಸ್ಯಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸರ್ಕಾರದಿಂದ ಪ್ರಾಧಿಕಾರಕ್ಕೆ ಯಾವುದೇ ಅನುದಾನ ಇಲ್ಲದೇ ಇರುವುದರಿಂದ ಪರಿಶೀಲನಾ ಶುಲ್ಕ ಪಾವತಿಸಿಕೊಳ್ಳುವುದನ್ನು ನಿಲ್ಲಿಸಿದಲ್ಲಿ ಪ್ರಾಧಿಕಾರದ ಆದಾಯ ಕುಂಠಿತವಾಗುತ್ತದೆ ಹಾಗೂ ಮುಂದೊಮ್ಮೆ ಆರ್ಥಿಕ ಪರಿಸ್ಥಿತಿ ಎದುರಾಗಬಹುದೆಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಕೂಲಂಕುಷವಾಗಿ ಚರ್ಚಿಸಿದ ಸಭೆಯು ಸರ್ಕಾರದ ನಿರ್ದೇಶನದಂತೆ ಭೂ–ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಲು ಪರಿಶೀಲನಾ ಶುಲ್ಕ ಪಾವತಿಸಿಕೊಳ್ಳದಿರಲು ನಿರ್ಣಯಿಸಿತು.

**<u>(ಆ)</u>** – ರಿಟ್ ಅರ್ಜಿ ಸಂಖ್ಯೆ 5656/2022 (LB-RES) ಗೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 21–07–2022 ರಂದು ನಡೆದ ಪ್ರಾಧಿಕಾರದ ಸಮಿತಿ ಸಭೆಯ ನಿರ್ಣಯದಂತೆ 6, 7 ಮತ್ತು 8ನೇ ಎದುರುದಾರರುಗಳಿಗೆ 10 ದಿನಗಳ ಒಳಗೆ ಹೇಳಿಕೆ ಸಲ್ಲಿಸುವಂತೆ ನೋಟೀಸು ನೀಡಲಾಗಿದೆ. ತದನಂತರ ಅನಧಿಕೃತ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮವನ್ನು ವಹಿಸಿರುವುದಿಲ್ಲ. ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 01–04–2022ರ ಆದೇಶದಲ್ಲಿ ಎದುರುದಾರರಾದ ಯೋಜನಾ ಪ್ರಾಧಿಕಾರಕ್ಕೆ ಎದುರುದರರುಗಳಿಗೆ ಕಾನೂನುಕ್ರಮ ಜರುಗಿಸುವಂತೆ ಸೂಚಿಸಿರುತ್ತದೆ. ಆದರೆ ಮಾನ್ಯ ಉಚ್ಚ ನ್ಯಾಯಾಯಲದ ಆದೇಶದಂತೆ ಈವರೆಗೆ ಕ್ರಮವಹಿಸದೇ ಇರುವುದರಿಂದ ಈ ನೋಟೀಸು ತಲುಪಿದ ಹತ್ತು ದಿನಗಳ ಒಳಗೆ ಮಾನ್ಯ ಉಚ್ಚ ನ್ಯಾಯಾಲಯದ

**ಪು.ತಿ.ನೋ**

ಆದೇಶದಂತೆ ಕ್ರಮವಹಿಸದಿದ್ದಲ್ಲಿ ದೂರುದಾರರು ನ್ಯಾಯಾಂಗ ನಿಂಧನೆ ಅರ್ಜಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸುವುದಾಗಿ ಸೂಚಿಸಿ ವಕೀಲರು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಹಾಗೂ ಮಾನ್ಯ ಜಿಲ್ಲಾಧಿಕಾರಿಯವರಿಗೆ ನೋಟೀಸು ನೀಡಿದ್ದು, ಈ ಬಗ್ಗೆ ಕೂಡಲೇ ಸೂಕ್ತ ಕ್ರಮವಹಿಸುವಂತೆ ಮಾನ್ಯ ಜಿಲ್ಲಾಧಿಕಾರಿಯವರು ದೂರವಾಣಿ ಮುಖಾಂತರ ತಿಳಿಸಿರುವುದಾಗಿ ಮುಖ್ಯಾಧಿಕಾರಿಗಳು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಚರ್ಚಿಸಿದ ಸಭೆಯು ದಿನಾಂಕ: 01–04–2022 ರಂದು ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ಆದೇಶವು ದಿನಾಂಕ: 28–04–2022 ರಂದು ಈ ಕಛೇರಿಗೆ ನ್ಯಾಯಾಲಯದ ರಿಜಿಸ್ಟರ್ ಜನರಲ್ ರವರ ಮುಖಾಂತರ ಸ್ವೀಕೃತಿಗೊಂಡಿದೆ ಹಾಗೂ ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಮಡಿಕೇರಿ ಇವರು ಸೂಕ್ತ ಕ್ರಮವಹಿಸುವಂತೆ ದಿನಾಂಕ: 07–05–2022 ರಂದು ಈ ಕಛೇರಿಗೆ ಪತ್ರ ಬರೆದಿರುತ್ತಾರೆ. ವಿಷಯದ ಬಗ್ಗೆ ದಿನಾಂಕ: 05–05–2022 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ವಿಷಯ ಸಂಖ್ಯೆ (4) ರಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ದಿನಾಂಕ: 11–05–2022 ರಂದು 6, 7 ಮತ್ತು 8 ನೇ ಎದುರುದಾರುಗಳಿಗೆ ನೋಟೀಸು ನೀಡಿ ಹೇಳಿಕೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಸದರಿಯವರು ಸಲ್ಲಿಸಿರುವ ಹೇಳಿಕೆಗಳನ್ನು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮ 1965 ರ ನಿಯಮ 37(3) ರಡಿ ರಚಿಸಲಾಗಿರುವ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ದಿನಾಂಕ: 21–07–2022 ರಂದು ಚರ್ಚಿಸಿ ನಿರ್ಣಯಿಸಿದಂತೆ ದೂರುದಾರರು ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿರುವ Annexure-A ರಸ್ತೆಗೆ ಸಂಬಂಧಿಸಿದ ವ್ಯಾಜ್ಯವಾಗಿರುವುದು ಕಂಡುಬಂದಿದ್ದರಿಂದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಇತ್ಯರ್ಥಪಡಿಸಿಕೊಳ್ಳುವಂತೆ ದೂರುದಾರರಾದ ಶ್ರೀ ಜಗದೀಶ ಡಿ.ಸಿ ಇವರಿಗೆ ಹಿಂಬರಹ ನೀಡಲಾಗಿತ್ತು. ದೂರುದಾರರು ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿರುವ Annexure-B ಗೆ ಸಂಬಂಧಿಸಿದಂತೆ ಅನಧಿಕೃತವಾಗಿ ನಿರ್ಮಿಸಿರುವ ರಸ್ತೆ, ಚರಂಡಿ, ವಿದ್ಯುತ್ ಕಂಬ ಕಾಂಪೌಂಡು ಕಟ್ಟಡ ಇತ್ಯಾದಿಗಳನ್ನು ನೋಟೀಸು ತಲುಪಿದ ಹತ್ತು ದಿನಗಳ ಒಳಗೆ ತೆರವುಗೊಳಿಸುವಂತೆ 6, 7, 8 ನೇ ಎದುರುದಾರರುಗಳಿಗೆ ನೋಟೀಸು ನೀಡುವಂತೆ ನಿರ್ಣಯಿಸಿದರ ಮೇರೆಗೆ ದಿನಾಂಕ: 26–07–2022 ರಂದು ನೋಟೀಸು ನೀಡಲಾಗಿತ್ತು ಹಾಗೂ ಜಮೀನು ನೋಟಿಫೈಡ್ ಏರಿಯಾದಲ್ಲಿದ್ದರು ಸಹ 1976 ನೇ ಇಸವಿ ಪೂರ್ವದಲ್ಲಿ ಭೂ–ಪರಿವರ್ತಿಸಿಕೊಂಡು ವಿನ್ಯಾ ಅನುಮೋದನೆ ಪಡೆಯದೇ ಇದ್ದರೂ ಸಹ ಸ್ಥಳೀಯ ಸಂಸ್ಥೆಯಿಂದ ತುಂಡು ಭೂಮಿಗೆ ಖಾತೆ ನೀಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುವಂತೆ ಕೋರಿ ದಿನಾಂಕ: 26–07–2022 ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು, ಈವರೆಗೆ ಮಾರ್ಗದರ್ಶನ ದೊರೆತಿರುವುದಿಲ್ಲ ಎಂಬುದಾಗಿ ಸದಸ್ಯಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ದಿನಾಂಕ: 05–08–2022 ರಂದು ಎದುರುದಾರರುಗಳು ಮನವಿ ಸಲ್ಲಿಸಿ, ನೀಡಿರುವ ನೋಟೀಸಿನಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 15(4), 17(4) ಹಾಗೂ ಕರ್ನಾಟಕ ನಗರ ಯೋಜನಾ ಪ್ರಾಧಿಕಾರ ನಿಯಮ 1965ರ ನಿಯಮ 37(3), 37(4) ಉಲ್ಲೇಖಿಸಿದ್ದು, ಸದರಿ ಕಾಯ್ದೆ ಕಲಂಗಳ ಬಗ್ಗೆ ಅರಿವು ಇಲ್ಲದೇ ಇರುವುದರಿಂದ ವಕೀಲರ ಸಲಹೆ ಪಡೆಯಲು ಒಂದು ತಿಂಗಳ ಕಾಲಾವಕಾಶ ಕೋರಿದ್ದರು. ಈ ಬಗ್ಗೆ ತೀರ್ಮಾನಿಸಲು ದಿನಾಂಕ: 20–08–2022 ರಂದು ಸಮಿತಿ ಸಭೆಯನ್ನು ನಡೆಸಲಾಗಿ ಸದರಿ ಸಭೆಯಲ್ಲಿ ಪಟ್ಟಣ ಪಂಚಾಯಿತಿ ನಾಮನಿರ್ದೇಶಿತ ಸದಸ್ಯರಾದ ಶ್ರೀ ಅಮೃತ್‌ರಾಜ್ ರವರು ಲೇಔಟ್ ರಸ್ತೆಯ ಜಮೀನು ಮೂಲ ಮಾಲೀಕರಾದ ಶ್ರೀ ವಿಜಯನ್ ಸಂದೀಪ್ ಮತ್ತು ಶ್ರೀ ರಾಮನ್ ವಿಜಯ ಹಾಗೂ ಶ್ರೀಮತಿ ಲೆಲಿದಾ ರಾಮನ್ ಇವರುಗಳ ಹೆಸರಿನಲ್ಲಿರುವುದು ಕಂಡುಬರುತ್ತಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ಬಗ್ಗೆ ಚರ್ಚಿಸಿದ ಸಭೆಯು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಅನುಮತಿ ಪಡೆದಿರುವ ಬಗ್ಗೆ ದಾಖಲೆ ಸಲ್ಲಿಸುವಂತೆ ಮೂಲ ಮಾಲೀಕರಾದ ಶ್ರೀ ವಿಜಯನ್ ಸಂದೀಪ್ ಮತ್ತು ಶ್ರೀ ರಾಮನ್ ವಿಜಯ ಹಾಗೂ ಶ್ರೀಮತಿ ಲೆಲಿದಾ ರಾಮನ್ ಇವರಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15, 17 ರನ್ವಯ ನೋಟೀಸು ನೀಡುವಂತೆ ನಿರ್ಣಯಿಸಿರುವುದರ ಮೇರೆಗೆ ಸದರಿಯವರಿಗೆ ದಿನಾಂಕ: 01–09–2022

ರಂದು ನೋಟಿಸು ನೀಡಿ ಹತ್ತು ದಿನಗಳ ಕಾಲಾವಕಾಶ ನೀಡಲಾಗಿದೆ ಎಂಬುದಾಗಿ ಸದಸ್ಯಕಾರ್ಯದರ್ಶಿ ಯವರು ಸಭೆಗೆ ತಿಳಿಸಿದರು. ಕೂಲಂಕುಷವಾಗಿ ಚರ್ಚಿಸಿದ ಸಭೆಯು ಜಮೀನಿನ ಮೂಲ ಮಾಲೀಕರಿಗೆ ನೋಟೀಸು ನೀಡಿರುವುದರಿಂದ ಸದರಿಯವರು ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮಕ್ಕೆಗೊಳ್ಳುವುದಾಗಿ ನಿರ್ಣಯಿಸಿತು ಹಾಗೂ ಈವರೆಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಮಡಿಕೇರಿ ಇವರಿಗೆ ಪತ್ರ ಬರೆಯುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿತು.

(ಇ) – ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 10/2 ರಲ್ಲಿನ2.25 ಎಕರೆ, ಸ.ನಂ. 89/4 ರಲ್ಲಿನ 1.40 ಎಕರೆ ಮತ್ತು ಸ.ನಂ. 9/2 ರಲ್ಲಿನ 0.40 ಎಕರೆ ಒಟ್ಟು 4.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು: ಶ್ರೀಮತಿ ದೇವಮ್ಮ ಕೋಂ ಪೌತಿ ದೇವಪ್ಪ)**

**ಟಿಪ್ಪಣಿ:–** ವಿಷಯಕ್ಕೆ ಸಂಬಂಧಿಸಿದಂತೆ, ಬೈಚನಹಳ್ಳಿ ಗ್ರಾಮದ ಸ.ನಂ. 9/2 ರಲ್ಲಿ 0.40 ಎಕರೆ ಜಮೀನಿನ ವಿನ್ಯಾಸ ಅನುಮೋದನೆ ನೀಡುವಂತೆ ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಡ್ಡೆಹೊಸೂರು ಗ್ರಾಮಪಂಚಾಯಿತಿ ಇವರು ಮತ್ತು ಬೈಚನಹಳ್ಳಿ ಗ್ರಾಮದ ಸ.ನಂ. 10/2 ರಲ್ಲಿನ 2.25 ಎಕರೆ ಹಾಗೂ ಸ.ನಂ. 89/4 ರಲ್ಲಿನ 1.40 ಎಕರೆ ಜಮೀನಿನ ವಿನ್ಯಾಸ ಅನುಮೋದನೆ ಕೋರಿ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಕುಶಾಲನಗರ ಇವರು ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 387206 ರಲ್ಲಿ ಸ.ನಂ. 9/2 ರ 0.40 ಎಕರೆ, ಜ್ಞಾಪನ ಪತ್ರ ಸಂಖ್ಯೆ: 387204 ರಲ್ಲಿ ಸ.ನಂ. 10/2 ರ 2.25 ಎಕರೆ, ಜ್ಞಾಪನ ಪತ್ರ ಸಂಖ್ಯೆ: 38703 ರಲ್ಲಿ ಸ.ನಂ. 89/4 ರ 1.40 ಎಕರೆ ಹೀಗೆ ಒಟ್ಟು 4.05 ಎಕರೆ ಜಮೀನುಗಳನ್ನು ವ್ಯವಸಾಯೇತರ Residential-layout ಉದ್ದೇಶಕ್ಕೆ ದಿನಾಂಕ: 02–09–2022 ರಲ್ಲಿ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನುಗಳ ಸ್ಥಳ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ಎಲ್ಲಾ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಒಬ್ಬರು ಮಾಲೀಕರ ಹೆಸರಿನಲ್ಲಿರುತ್ತದೆ. ವಿಷಯನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರಸ್ತಾವಿತ ಜಮೀನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ವಸತಿ ವಲಯದಲ್ಲಿ ಹಾಗೂ ಜಮೀನಿನ ಪೂರ್ವ ದಿಕ್ಕಿಗೆ ಮಳೆ ನೀರು ಹರಿಯುವ ತೋಡಿಗೆ ಹೊಂದಿಕೊಂಡಂತೆ ಉದ್ಯಾನವನ ಬಯಲುಜಾಗ (ಬಫರ್ ಉದ್ದೇಶ)ದ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ ಸರಾಸರಿ 9.0ಮೀ ಅಗಲದ ಪಂಚಾಯಿತಿ ರಸ್ತೆಗೆ ಹಾಗೂ ಪೂರ್ವ ದಿಕ್ಕಿನಲ್ಲಿ 9.0ಮೀ ಮತ್ತು 12.0ಮೀ ಅಗಲದ ಸಾರ್ವಜನಿಕ ರಸ್ತೆ (Layout road) ಯಿಂದ ಸಂಪರ್ಕ ಹೊಂದಿರುತ್ತದೆ. ಪಶ್ಚಿಮ ದಿಕ್ಕಿನ ರಸ್ತೆಯನ್ನು ಅಂತಿಮ ಮಹಾಯೋಜನೆಯಲ್ಲಿ 12.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಿದೆ. ಪ್ರಸ್ತಾವಿತ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ ಸದರಿ ಎಲ್ಲಾ ಜಮೀನುಗಳನ್ನು ಒಟ್ಟುಗೂಡಿಸಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಒಟ್ಟು 4.05 ಎಕರೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಹಾಗೂ ಶೇಕಡಾ 3 ರಷ್ಟು ಜಮೀನನ್ನು ವಾಣಿಜ್ಯ ಉದ್ದೇಶದ ನಿವೇಶನಕ್ಕೆ ಮೀಸಲಿರಿಸುವಂತೆ ಅರ್ಜಿದಾರರು ಪತ್ರದ ಮುಖೇನ ಕೋರಿರುತ್ತಾರೆ. ಸ.ನಂ. 89/4 ರ ಭಾಗಶ ಭಾಗವು ನದಿಯ ಹಿನ್ನೀರಿನಿಂದ ಜಲಾವೃತಗೊಳ್ಳುವ ಪ್ರದೇಶ ಎಂಬುದಾಗಿ ಮಹಾಯೋಜನೆ ನಕ್ಷೆಯಲ್ಲಿ ಗುರುತಿಸಲಾಗಿರುತ್ತದೆ. ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯನ್ನು 12.0ಮೀ ಅಗಲೀಕರಣಕ್ಕೆ ಸ್ಥಳಕಾಯ್ದಿರಿಸಿ, ವಸತಿ ಉದ್ದೇಶಕ್ಕೆ ವಸತಿ ಉಪಯೋಗಕ್ಕಾಗಿ 8543.08 ಚ.ಮೀ (ಶೇ.52.12%), ವಾಣಿಜ್ಯ ಉದ್ದೇಶಕ್ಕೆ 426.74 ಚ.ಮೀ (ಶೇ. 2.60), ಉದ್ಯಾನವನ ಹಾಗೂ ಆಟದ ಮೈದಾನಕ್ಕಾಗಿ 1640.49 ಚ.ಮೀ (ಶೇ.10.00%),

ನಾಗರೀಕ ಸೌಲಭ್ಯಕ್ಕಾಗಿ 819.80 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 4959.65 ಚ.ಮೀ (ಶೇ.30.26%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಿ ಕರಡು ನಕ್ಷೆಯನ್ನು ಅರ್ಜಿದಾರರು ಸಲ್ಲಿಸಿದ್ದು, ಕರಡು ವಿನ್ಯಾಸ ನಕ್ಷೆಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 17(2) ಮತ್ತು 17(2ಎ) ರಡಿ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

**<u>ನಿರ್ಣಯ:–</u>** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಪ್ರಸ್ತಾವಿತ ಜಮೀನಿನ ಸ್ಥಳ ಪರಿಶೀಲನೆಯನ್ನು ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯರುಗಳು ನಡೆಸಿದ ನಂತರ ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಕರಡು ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2) ಮತ್ತು (2ಎ) ರನ್ವಯ ಅನುಮೋದನೆ ನೀಡುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

**(<u>ಈ</u>)** – ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗಾಮದ ಸ.ನಂ. 96/14 ರಲ್ಲಿನ 3.25 ಎಕರೆ ವಿಸ್ತೀರ್ಣದ ಜಮೀನಿನ ಕೈಗಾರಿಕೆ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು: ಶ್ರೀ ಡಿ.ಎಸ್. ಜಗದೀಶ್ ಬಿನ್ ಪೌತಿ ಸಣ್ಣಯ್ಯ)**

**<u>ಟಿಪ್ಪಣಿ:</u>** ವಿಷಯಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗಾಮದ ಸ.ನಂ. 96/14 ರಲ್ಲಿನ 3.25 ಎಕರೆ ವಿಸ್ತೀರ್ಣದ ಜಮೀನಿನ ಕೈಗಾರಿಕೆ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: 191551 ದಿನಾಂಕ: 13–11–202 ರಲ್ಲಿ ಕೈಗಾರಿಕೆ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ಅಂತಿಮ ಮಹಾಯೋಜನೆಯಲ್ಲಿ ಕೈಗಾರಿಕೆ ವಲಯದಲ್ಲಿದೆ ಹಾಗೂ ದಕ್ಷಿಣ ದಿಕ್ಕಿನಲ್ಲಿ 6.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಉಪಗಮನ ಹೊಂದಿದೆ. ಸದರಿ ರಸ್ತೆಯನ್ನು ಮುಂದುವರೆಸಿ ಅಂತಿಮ ಮಹಾಯೋಜನೆಲ್ಲಿ 12.0ಮೀ ಅಗಲದ ರಸ್ತೆಯನ್ನು ಪ್ರಸ್ತಾವಿಸಲಾಗಿದೆ. ಪ್ರಸ್ತಾವಿತ ಜಮೀನನ್ನು ಆರ್.ಎಂ.ಸಿ ಪ್ಲಾಂಟ್ ಉದ್ದೇಶಕ್ಕೆ ಬಳಸುವ ಉದ್ದೇಶವಿರುವುದಾಗಿ ಅರ್ಜಿದಾರರು ಪತ್ರದ ಮುಖಾಂತರ ತಿಳಿಸಿರುತ್ತಾರೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ಕೈಗಾರಿಕೆ ಉಪಯೋಗಕ್ಕಾಗಿ 9577.253 ಚ.ಮೀ (ಶೇ. 72.83%), ಬಯಲುಜಾಗಕ್ಕಾಗಿ 1315.890 ಚ.ಮೀ (ಶೇ. 10.01%), ವಾಹನ ನಿಲುಗಡೆಗಾಗಿ 657.633 ಚ.ಮೀ (ಶೇ. 5.00%) ಮತ್ತು ರಸ್ತೆ ವಿಸ್ತರಣೆಗಾಗಿ 1598.724 ಚ.ಮೀ (ಶೇ. 12.16%) ವಿಸ್ತೀರ್ಣದ ಪ್ರದೇಶವನ್ನು ಮೀಸಲಿರಿಸಿ ವಿನ್ಯಾಸ ನಕ್ಷೆ ಸಲ್ಲಿಸಿರುತ್ತಾರೆ. ವಿಷಯನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u>** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಸ್ತಾವಿತ ಜಮೀನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಕೈಗಾರಿಕಾ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ದಕ್ಷಿಣ ದಿಕ್ಕಿನಲ್ಲಿ 6.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಉಪಗಮನ ಹೊಂದಿದೆ. ಸದರಿ ರಸ್ತೆಯನ್ನು ಮುಂದುವರೆಸಿ ಅಂತಿಮ ಮಹಾಯೋಜನೆಯಲ್ಲಿ 12.0ಮೀ ಅಗಲದ ರಸ್ತೆಯನ್ನು ಪ್ರಸ್ತಾವಿಸಲಾಗಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ಕೈಗಾರಿಕೆ ಉಪಯೋಗಕ್ಕಾಗಿ 9577.253 ಚ.ಮೀ (ಶೇ. 72.83%), ಬಯಲುಜಾಗಕ್ಕಾಗಿ 1315.890 ಚ.ಮೀ (ಶೇ. 10.01%), ವಾಹನ ನಿಲುಗಡೆಗಾಗಿ 657.633 ಚ.ಮೀ (ಶೇ. 5.00%) ಮತ್ತು ರಸ್ತೆ ವಿಸ್ತರಣೆಗಾಗಿ 1598.724 ಚ.ಮೀ (ಶೇ. 12.16%) ವಿಸ್ತೀರ್ಣದ ಪ್ರದೇಶವನ್ನು ಮೀಸಲಿರಿಸಿ ವಿನ್ಯಾಸ ನಕ್ಷೆ ಸಲ್ಲಿಸಿರುತ್ತಾರೆ. ನಿವೇಶನದಲ್ಲಿ ಅಭಿವೃದ್ಧಿಕಾರ್ಯ ಅನುಮೋದನೆ ಪೂರ್ವದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಇಲಾಖೆಯಿಂದ ಸ್ಥಾಪನ ಸಮ್ಮತಿ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಡಿಸಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ. ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ಪು.ತಿ.ನೋ**

**ನಿರ್ಣಯ:–** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಕೈಗಾರಿಕೆ (ಆರ್.ಎಂ.ಸಿ ಪ್ಲಾಂಟ್) ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಯನ್ನು ಪರಿಶೀಲಿಸಿತು ಹಾಗೂ ಸಾರ್ವಜನಿಕ ರಸ್ತೆಯಿಂದ ರಸ್ತೆಯ ಉಪಗಮನವಿರುವುದರಿಂದ ನಿವೇಶನದಲ್ಲಿ ಅಭಿವೃದ್ಧಿಕಾರ್ಯ ಅನುಮೋದನೆ ಪೂರ್ವದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಇಲಾಖೆಯಿಂದ ಸ್ಥಾಪನ ಸಮ್ಮತಿ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಪಡಿಸಿ ಕೈಗಾರಿಕೆ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

(ಊ) – ಪ್ರಾಧಿಕಾರದ ಸದಸ್ಯರಾದ ಶ್ರೀ ಮಧುಸೂಧನ್ ರವರು ಮಾತಾನಾಡಿ ಈ ಕಛೇರಿಯಿಂದ ಕಟ್ಟಡ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡದೇ ಇರುವಂತಹ ಪ್ರಕರಣಗಳಿಗೆ ನಿವೇಶನದ ಮಾಲೀಕರು ಕೆಲವು ಖಾಸಗಿ ಇಂಜಿನಿಯರ್ ಗಳಿಂದ ಕಟ್ಟಡ ನಕ್ಷೆಗಳನ್ನು ರಚಿಸಿ ಅಕ್ರಮವಾಗಿ ಈ ಕಛೇರಿಯ ಸಿಲ್ ಹಾಗೂ ಸಹಿಯನ್ನು ಮಾಡಿಸಿಕೊಂಡು ಬ್ಯಾಂಕ್ ಸಲ್ಲಿಸಿ ಲೋನ್ ಪಡೆಯುತ್ತಿರುವುದಾಗಿ ಸಾರ್ವಜನಿಕರು ತಮ್ಮಲ್ಲಿ ಹೇಳಿರುವುದಾಗಿ ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಚರ್ಚೆ ನಡೆದು ಇಂತಹ ಪ್ರಕರಣಗಳು ನಡೆದಿರುವ ಬಗ್ಗೆ ಗಮನಕ್ಕೆ ಬಂದಿರುವುದಿಲ್ಲ ಹಾಗೂ ಖಾಸಗಿ ಇಂಜಿನಿಯರ್‌ಗಳು ಈ ಕಛೇರಿಯ ಸಿಲ್ ಅನ್ನು ಅಕ್ರಮವಾಗಿ ಉಪಯೋಗಿಸುತ್ತಿರುವ ಬಗ್ಗೆ ಲಿಖಿತ ರೂಪದಲ್ಲಿ ದೂರು ಸಲ್ಲಿಸಿದಲ್ಲಿ ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಜರುಗಿಸುವುದಾಗಿ ಸದಸ್ಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ಅಧ್ಯಕ್ಷರು ಮಾತನಾಡಿ ಈ ರೀತಿ ಸುಳ್ಳು ದಾಖಲೆಗಳನ್ನು ಸೃಷ್ಟಿಸುವವರ ಬಗ್ಗೆ ವಿವರಣೆಯನ್ನು ಸದಸ್ಯರು ಕಛೇರಿಗೆ ನೀಡುವಂತೆ ತಿಳಿಸಿದರು. ವಿಷಯದ ಬಗ್ಗೆ ವಿಸ್ತೃತ ಚರ್ಚೆ ನಡೆದು ಸಾರ್ವಜನಿಕರು ಕಟ್ಟಡ ನಿರ್ಮಾಣ ಹಾಗೂ ಅನುಮೋದಿತ ವಿನ್ಯಾಸ ನಕ್ಷೆಯನ್ನು ಬ್ಯಾಂಕ್‌ಗೆ ಸಲ್ಲಿಸಿ ಲೋನ್ ಪಡೆಯಲು ಸಾರ್ವಜನಿಕರು ಅರ್ಜಿ ಸಲ್ಲಿಸಿದಾಗ ಸದರಿ ನಕ್ಷೆಗಳು ಈ ಕಛೇರಿಯಿಂದ ಅನುಮೋದನೆಗೊಂಡಿರುವ ಬಗ್ಗೆ ಈ ಕಛೇರಿಯಿಂದ ಪರಿಶೀಲಿಸಿಕೊಳ್ಳುವುದು ಸೂಕ್ತ ಎಂಬುದಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಪತ್ರ ಬರೆಯುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

**(ಊ)** – ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರು ಮಾತನಾಡಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಗೆ ನೀಡಲಾಗುತ್ತಿರುವ ಮೊಬಲಗಿನಲ್ಲಿ ಇಪಿಎಫ್ ಹಾಗೂ ಇಎಸ್‌ಐ ವಂತಿಕೆಯನ್ನು ವಸೂಲಿ ಮಾಡುತ್ತಿರುವ ಮಾಹಿತಿಯನ್ನು ಸಭೆಯಲ್ಲಿ ಕೇಳಿದಾಗ ಸದಸ್ಯ ಕಾರ್ಯದರ್ಶಿಯವರು ಯೋಜನಾ ಪ್ರಾಧಿಕಾರಕ್ಕೆ ಸದಸ್ಯ ಕಾರ್ಯದರ್ಶಿಯ ಹುದ್ದೆಯನ್ನು ಬಿಟ್ಟು ಇತರೆ ಯಾವುದೇ ತಾಂತ್ರಿಕ/ಆಡಳಿತ ಸಿಬ್ಬಂದಿಯ ಹುದ್ದೆಯನ್ನು ಸೃಜಿಸಿರುವುದಿಲ್ಲವಾದ್ದರಿಂದ ಹಾಗೂ ಯೋಜನಾ ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದಿದ್ದರಿಂದ ಕಛೇರಿಯ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಸಿಬ್ಬಂದಿಗಳ ಸೇವೆಯು ಅವಶ್ಯಕತೆ ಇದ್ದುದರಿಂದ ಖಾಸಗಿ ಸಂಸ್ಥೆಯಿಂದ ಕಛೇರಿ ಸಹಾಯಕ, ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ದರ್ಜೆ ನೌಕರರುಗಳ ಸೇವೆಯನ್ನು ಹೊರಗುತ್ತಿಗೆ ಮುಖಾಂತರ ಸಂಚಿತ ವೇತನದೊಂದಿಗೆ ಪಡೆಯಲಾಗಿದೆ ಮತ್ತು ಮೊಬಲಗನ್ನು ಸದರಿ ಸಂಸ್ಥೆಗೆ ಪಾವತಿಸಲಾಗುತ್ತಿದೆ. ಪ್ರಾಧಿಕಾರಕ್ಕೆ ತಾಂತ್ರಿಕ/ಆಡಳಿತ ಸಿಬ್ಬಂದಿಗಳ ಹುದ್ದೆಯನ್ನು ಸೃಜಿಸುವಂತೆ ಕೋರಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಅನೇಕ ಬಾರಿ ಪತ್ರ ಬರೆದರೂ ಇಲ್ಲಿಯವರೆಗೆ ಯಾವುದೇ ಹುದ್ದೆಯನ್ನು ಪ್ರಾಧಿಕಾರಕ್ಕೆ ಸೃಜಿಸಿರುವುದಿಲ್ಲ. ಇತ್ತೀಚೆಗೆ ಯೋಜನಾ ಪ್ರಾಧಿಕಾರದ ಲೆಕ್ಕ ತಪಾಸಣೆಯನ್ನು ನಡೆಸಿದ ಸ್ಥಳೀಯ ಲೆಕ್ಕಪರಿಶೋಧನಾ ಅಧಿಕಾರಿಗಳು ಹೊರಗುತ್ತಿಗೆ ಸೇವೆ ನೌಕರರಿಗೆ ಇಪಿಎಫ್ ಮತ್ತು ಇಎಸ್‌ಐ ಸೌಲಭ್ಯ ನೀಡದೆ ಇರುವುದನ್ನು ಗಮನಿಸಿ ಇನ್ನು ಮುಂದೆ ಹೊರಗುತ್ತಿಗೆ ಸೇವಾ ನೌಕರರಿಗೆ ಇಪಿಎಫ್ ಮತ್ತು ಇಎಸ್‌ಐ ಸೌಲಭ್ಯ ನೀಡುವಂತೆ ಸೂಚಿಸಿರುತ್ತಾರೆ ಎಂಬ ವಿಷಯವನ್ನು ಸಭೆಗೆ ತಿಳಿಸಿದರು. ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿದ ಸಭೆಯು ಕಾರ್ಮಿಕ ಇಲಾಖೆಯ ನಿಯಮಾನುಸಾರ ಕನಿಷ್ಠ ವೇತನ ಹಾಗೂ ಇಪಿಎಫ್ ಮತ್ತು ಇಎಸ್‌ಐ ಸೌಲಭ್ಯವನ್ನು ಹೊರಗುತ್ತಿಗೆ ಸೇವೆಯ

**ಪು.ತಿ.ನೋ**

ನೌಕರರಿಗೆ ನೀಡಬೇಕಾಗಿರುವುದರಿಂದ ಇಪಿಎಫ್ ಮತ್ತು ಇಎಸ್ಐ ವಂತಿಕೆಯನ್ನು ಪಾವತಿಸುವ ಖಾಸಗಿ ಸಂಸ್ಥೆಗಳಿಂದ ದರಪಟ್ಟಿ ಪಡೆದು ಕಡಿಮೆ ದರ ನಮೂದಿಸುವ ಖಾಸಗಿ ಸಂಸ್ಥೆಯಿಂದ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ದರ್ಜೆ ನೌಕರರ ಸೇವೆಯನ್ನು ಕಛೇರಿಯ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಹಾಗೂ ಆಡಳಿತ ಮತ್ತು ಲೆಕ್ಕ ವಿಭಾಗದ ಕೆಲಸವನ್ನು ಉತ್ತಮವಾಗಿ ಕಾರ್ಯನಿರ್ವಹಿಸಲು ಸರ್ಕಾರದ ಆದೇಶ ಸಂಖ್ಯೆ ಎಸ್ ಡಬ್ಲ್ಯು/115/ಸಕೆಸೆ/2010 ಬೆಂಗಳೂರು ದಿನಾಂಕ: 26–07–2010 ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯಲ್ಲಿ ತಿಳಿಸಿರುವಂತೆ ನಿವೃತ್ತಿ ನೌಕರರ ಸೇವೆಯನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲು ಮತ್ತು ಅವರು ನಿವೃತ್ತಿ ಕಾಲಕ್ಕೆ ಪಡೆಯುತ್ತಿದ್ದ ಮೂಲ ವೇತನದಲ್ಲಿ ನಿಗಧಿಪಡಿಸಿರುವ ವಿಶ್ರಾಂತಿ ವೇತನವನ್ನು ಹೊರತುಪಡಿಸಿದಂತೆ ಉಳಿಕೆ ಮೂಲ ವೇತನವನ್ನು ನೀಡಬಹುದೆಂದು ಒಪ್ಪಿಗೆ ನೀಡಿ ಸಭೆಯು ನಿರ್ಣಯಿಸಿ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–
ಸದಸ್ಯ ಕಾರ್ಯದರ್ಶಿ
ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ

ಸಹಿ/–
ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ